ಒಳಗಾಗಿ ಪ್ರಯೋಗಾಲಯ ತಲುಪಿಸಬೇಕು. ಸ್ವಚ್ಛವಾದ, ಪ್ರಯೋಗಾಲಯದಲ್ಲಿ ಕೊಟ್ಟ ಸಂಗ್ರಹ ಡಬ್ಬಿಯಲ್ಲಿಯೇ ಸಂಗ್ರಹಿಸಬೇಕು. ಅದರಲ್ಲಿ ತೇವಾಂಶ ಇರಬಾರದು. ಪ್ರಯೋಗಾಲಯಕ್ಕೆ ಕೊಂಡೊಯ್ಯುವಾಗ ಸೂರ್ಯನ ಶಾಖ ಅಥವಾ ತಣ್ಣನೆಯ ವಾತಾವರಣದ ಸಂಪರ್ಕ ಬರದಂತೆ ದೇಹಕ್ಕೆ ಹತ್ತಿರವೇ ಇರಿಸಿಕೊಂಡು ಕೊಂಡೊಯ್ಯಬೇಕು. ಯಾವ ಕಾರಣಕ್ಕೂ ಮಾದರಿಯನ್ನು ಫ್ರಿಜ್‌ನಲ್ಲಿ ಇಡಬಾರದು.

ಈ ರೀತಿ ಸಂಗ್ರಹಿಸುವುದು ಕಷ್ಟಸಾಧ್ಯ ಎಂದೆನಿಸುವ ಸಂದರ್ಭಗಳಲ್ಲಿ ಲೈಂಗಿಕ ಪ್ರಕ್ರಿಯೆಯ ಸಂದರ್ಭದಲ್ಲಿ ಕಾಂಡೋಮ್‌ಗಳಲ್ಲಿಯೂ ಸಂಗ್ರಹಿಸಬಹುದು. ಆದರೆ ಈ ರೀತಿ ಸಂಗ್ರಹಿಸುವಾಗ ಮೊದಲು ಕಾಂಡೋಮ್‌ಗಳನ್ನು ಚೆನ್ನಾಗಿ ತೊಳೆದು ಸ್ವಚ್ಛಗೊಳಿಸಿರಬೇಕು. ಇಲ್ಲದಿದ್ದಲ್ಲಿ ಕಾಂಡೋಮ್‌ಗಳಲ್ಲಿ ಲೇಪಿಸಿರಬಹುದಾದ ವೀರ್ಯಾಣು ನಿರೋಧಕ ವಸ್ತುಗಳಿಂದಾಗಿ ವೀರ್ಯಾಣುಗಳು ನಿಷ್ಕ್ರಿಯಗೊಂಡು ನಿಖರವಾದ ವರದಿ ಸಿಗದಂತಾಗಬಹುದು. ಹೀಗೆ ಸಂಗ್ರಹಿಸಿದ ಮಾದರಿಯನ್ನು ಒಂದು ಗಂಟೆಯ ಒಳಗಾಗಿ ಪ್ರಯೋಗಾಲಯ ತಲುಪಿಸಬೇಕು.

ವೀರ್ಯ ತಪಾಸಣೆಗೆ ಬರುವ ಹಿಂದಿನ ಮೂರು ದಿನಗಳವರೆಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿರಬಾರದು. ಇದು ಸಮರ್ಪಕ ಪರಿಮಾಣದ ವೀರ್ಯ ಸಂಗ್ರಹಣೆಗೆ ಪೂರಕವಾಗಿರುತ್ತದೆ.

## ಯಾವ ಪರೀಕ್ಷೆಗಳು?

ಪ್ರಯೋಗಾಲಯ ತಲುಪಿದ ವೀರ್ಯದ ಮಾದರಿಯನ್ನು ಮೂರು ಬಗೆಯ ಪರೀಕ್ಷೆಗಳಿಗೆ ಒಳಪಡಿಸಲಾಗುತ್ತದೆ. ಅವೆಂದರೆ, ಬರಿಗಣ್ಣಿನ ಪರೀಕ್ಷೆ, ಸೂಕ್ಷ್ಮದರ್ಶಕ ಯಂತ್ರದ ಮೂಲಕ ಮಾಡುವ ಪರೀಕ್ಷೆ ಮತ್ತು ರಾಸಾಯನಿಕ ವಸ್ತುವಿನ ಇರುವಿಕೆಗಾಗಿ ಪರೀಕ್ಷೆ.

## ಬರಿಗಣ್ಣಿನ ಪರೀಕ್ಷೆ

ಬರಿಗಣ್ಣಿನ ಪರೀಕ್ಷೆಯಲ್ಲಿ ವೀರ್ಯದ ಪರಿಮಾಣ, ಅದರ ಸ್ನಿಗ್ಧತೆ, ಬಣ್ಣ, ಅದು ದ್ರವೀಕರಿಸಲು ತೆಗೆದುಕೊಳ್ಳುವ ಸಮಯ ಮೊದಲಾದ ಅಂಶಗಳನ್ನು ಗಮನಿಸಲಾಗುತ್ತದೆ. ಸಾಮಾನ್ಯವಾಗಿ ಸಂಗ್ರಹಿಸಿದ ವೀರ್ಯದ ಮಾದರಿಯು ಪರಿಮಾಣದಲ್ಲಿ ಎರಡರಿಂದ ಆರು ಮಿಲಿ ಲೀಟರ್‌ಗಳಷ್ಟಿರುತ್ತದೆ ಮತ್ತು ಒಂದು ಬಗೆಯ ಸ್ನಿಗ್ಧ, ಅಪಾರದರ್ಶಕ, ಅಂಟಂಟಾದ ಬೂದು ಮಿಶ್ರಿತ ಬಿಳಿ ಬಣ್ಣದ ಹೆಪ್ಪುಗಟ್ಟಿದಂತಹ ದ್ರವವಾಗಿರುತ್ತದೆ. ಸಂಗ್ರಹಿಸಿ ಸುಮಾರು ಮೂವತ್ತರಿಂದ ನಲವತ್ತೈದು ನಿಮಿಷಗಳಲ್ಲಿ ಅದು ಅರೆ ಪಾರದರ್ಶಕ ದ್ರವವಾಗುತ್ತದೆ. ಬರಿಗಣ್ಣಿನ ಪರೀಕ್ಷೆಯಲ್ಲಿ ಈ ಎಲ್ಲ ಅಂಶಗಳನ್ನು ಮತ್ತು ಮುಖ್ಯವಾಗಿ ಅದು ದ್ರವೀಕರಣಗೊಳ್ಳಲು ತೆಗೆದುಕೊಳ್ಳುವ ಸಮಯವನ್ನು ಗಮನಿಸಬೇಕು. ಅತಿಯಾದ ಸ್ನಿಗ್ಧತೆ ವೀರ್ಯಾಣುಗಳ ಚಲನೆಗೆ ಅಡ್ಡಿಯಾಗಬಹುದು. ಅಂತೆಯೇ ವೃಷಣಗಳಲ್ಲಿ ಅಥವಾ ಉಪ ಅಂಗಾಂಗಗಳಲ್ಲಿ ಸೋಂಕಿದ್ದಾಗಲೂ ದ್ರವೀಕರಣಗೊಳ್ಳಲು ಹೆಚ್ಚು ಸಮಯವನ್ನು ತೆಗೆದುಕೊಳ್ಳಬಹುದು. ಇಂತಹ ಅಸಹಜತೆಯನ್ನು ವರದಿಯಲ್ಲಿ ತಿಳಿಸಲಾಗುತ್ತದೆ.

## ಸೂಕ್ಷ್ಮದರ್ಶಕ ಮೂಲಕ ಮಾಡುವ ಪರೀಕ್ಷೆಗಳು

ಒಮ್ಮೆ ದ್ರವೀಕರಣಗೊಂಡ ವೀರ್ಯದ ಮಾದರಿಯನ್ನು ವೀರ್ಯಾಣುಗಳ ಸಂಖ್ಯೆ, ಅವುಗಳ ಚಲನಶೀಲತೆ, ಅವುಗಳ ಆಕಾರ, ರೂಪವಿಜ್ಞಾನ, ಅಸಹಜ ವೀರ್ಯಾಣುಗಳ ಇರುವಿಕೆ ಮತ್ತು ಅವುಗಳ ಶೇಕಡಾವಾರು ಸಂಖ್ಯೆ, ಇತರ ಜೀವಕೋಶಗಳು ಮತ್ತು ಸೂಕ್ಷ್ಮಾಣುಗಳ ಇರುವಿಕೆ ಮತ್ತು ಅವುಗಳ ಶೇಕಡಾವಾರು ಸಂಖ್ಯೆಗಾಗಿ ಸರಳ ಸಲಕರಣೆಗಳನ್ನು ಮತ್ತು ವರ್ಣದ್ರವ್ಯಗಳನ್ನು ಬಳಸಿ ಗಮನಿಸುತ್ತಾರೆ. ಅತ್ಯಂತ ವಿರಳ ಸಂದರ್ಭಗಳಲ್ಲಿ ವೀರ್ಯದ ಮಾದರಿಯು ದ್ರವೀಕರಣಗೊಳ್ಳದಿದ್ದಾಗ ಸೂಕ್ಷ್ಮದರ್ಶಕ ಯಂತ್ರದ ಮೂಲಕ ಮಾಡುವ ತಪಾಸಣೆಗಳನ್ನು ಮಾಡಲಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಅದನ್ನು ವಿಶೇಷ ರಾಸಾಯನಿಕಗಳನ್ನು ಬಳಸಿ ದ್ರವೀಕರಣಗೊಂಡ ನಂತರವೇ ತಪಾಸಣೆ ಮಾಡಬೇಕಾಗುತ್ತದೆ.

ಸಾಮಾನ್ಯವಾಗಿ ವೀರ್ಯಾಣುಗಳ ಸಂಖ್ಯೆ ಒಂದು ಮಿಲಿ ಲೀಟರ್‌ನಲ್ಲಿ ಇಪ್ಪತ್ತರಿಂದ ನೂರೈವತ್ತು ಮಿಲಿಯನ್‌ವರೆಗೆ ಇರುತ್ತದೆ. ಶೇಕಡ ಎಪ್ಪತ್ತಕ್ಕೂ ಹೆಚ್ಚು ವೀರ್ಯಾಣುಗಳು ಪೂರ್ಣಪ್ರಮಾಣದ ಚಲನಶೀಲತೆಯನ್ನು ಹೊಂದಿರುತ್ತವೆ. ಶೇ.ಎಪ್ಪತ್ತಕ್ಕಿಂತಲೂ ಹೆಚ್ಚು ವೀರ್ಯಾಣುಗಳು ಸಾಮಾನ್ಯ ಆಕಾರ ಮತ್ತು ರೂಪವಿಜ್ಞಾನವನ್ನು ಹೊಂದಿರುತ್ತವೆ.

ವೀರ್ಯಾಣುಗಳ ಸಂಖ್ಯೆ ಇಪ್ಪತ್ತು ಮಿಲಿಯನ್‌ಗಿಂತಲೂ ಕಡಿಮೆ ಇದ್ದಾಗ ಅದನ್ನು ಆಲಿಗೋಜೂಸ್ಪರ್ಮಿಯ ಎಂದು ಪರಿಗಣಿಸಲಾಗುತ್ತದೆ. ಒಮ್ಮೊಮ್ಮೆ ಒಂದು ವೀರ್ಯಾಣುವೂ ಕಂಡುಬರದಿದ್ದಾಗ ಅದನ್ನು ಅಜೂಸ್ಪರ್ಮಿಯ ಎಂದು ಪರಿಗಣಿಸಲಾಗುತ್ತದೆ. ಸಾಮಾನ್ಯ ಚಹರೆಯ ವೀರ್ಯಾಣುಗಳು ಶೇಕಡ ಎಪ್ಪತ್ತಕ್ಕಿಂತಲೂ ಕಡಿಮೆ ಇದ್ದಾಗ ಅದನ್ನು ಅಸ್ತೆನೋಜೂಸ್ಪರ್ಮಿಯ ಎಂದು ಕರೆಯುತ್ತಾರೆ. ವೀರ್ಯಾಣುಗಳ ಸಂಖ್ಯೆಯೂ ಕಡಿಮೆ ಇದ್ದು ಚಹರೆಯಲ್ಲಿಯೂ ಅಸಾಮಾನ್ಯ ವೀರ್ಯಾಣುಗಳು ಶೇಖಡ ಎಪ್ಪತ್ತಕ್ಕಿಂತಲೂ ಹೆಚ್ಚಿದ್ದಾಗ ಅದನ್ನು ಆಲಿಗೋಅಸ್ತೆನೋಜೂಸ್ಪರ್ಮಿಯ ಎಂದು ಕರೆಯಲಾಗುತ್ತದೆ.

## ರಾಸಾಯನಿಕ ವಸ್ತುವಿನ ಇರುವಿಕೆಗಾಗಿ ಪರೀಕ್ಷೆ

ವೀರ್ಯದಲ್ಲಿನ ಫ್ರಕ್ಟೋಸ್ ಎಂಬ ರಾಸಾಯನಿಕವು ವೀರ್ಯಾಣುಗಳ ಪೋಷಣೆಯಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಇದರ ಇರುವಿಕೆಯನ್ನು ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಲಾಗುತ್ತದೆ. ಒಂದೊಮ್ಮೆ ಈ ಫ್ರಕ್ಟೋಸ್ ಇಲ್ಲದಿದ್ದಲ್ಲಿ ಅದು ಅಸಹಜತೆಯನ್ನು ಸೂಚಿಸುತ್ತದೆ. ಉಪ ಅಂಗಾಂಗ ಸೆಮೈನಲ್ ವೆಸೈಕಲ್‌ನಲ್ಲಿ ದೋಷವಿದ್ದಾಗ ಫ್ರಕ್ಟೋಸ್ ಅಂಶ ಕಡಿಮೆಯಾಗಬಹುದು.

ವೃಷಣ ಅಥವಾ ಉಪ ಅಂಗಾಂಗಗಳಲ್ಲಿ ಸೋಂಕು ಇದ್ದಾಗ ವೀರ್ಯದ ಮಾದರಿಯಲ್ಲಿ ಕೆಲವು ಅಸಹಜ ಜೀವಕೋಶಗಳೂ ಪತ್ತೆಯಾಗಬಹುದು. ಹಾಗಾಗಿಯೇ ಬಿಳಿ ಮತ್ತು ಕೆಂಪು ರಕ್ತ ಕಣಗಳು, ಸೂಕ್ಷ್ಮಾಣು ಜೀವಿಗಳಿಗಾಗಿಯೂ ವೀರ್ಯವನ್ನು ತಪಾಸಣೆ ಮಾಡಲಾಗುತ್ತದೆ. ಸೂಕ್ಷ್ಮಾಣುಗಳು ಕಂಡುಬಂದಾಗ ಸೂಕ್ತ ಆ್ಯಂಟಿಬಯೊಟಿಕ್‌ಗಳನ್ನು ಕೊಡಬೇಕಾಗುತ್ತದೆ.

ವರದಿಯಲ್ಲಿನ ಪ್ರತಿಯೊಂದು ಅಂಶವನ್ನೂ ವಿವರವಾಗಿ ಪರಿಶೀಲಿಸಿದ ನಂತರ ಸ್ತ್ರೀರೋಗ ತಜ್ಞರು ಮತ್ತು ಮೂತ್ರಪಿಂಡ ಶಸ್ತ್ರಚಿಕಿತ್ಸಾ ತಜ್ಞರ ಸಹಯೋಗದಲ್ಲಿ ಚಿಕಿತ್ಸೆಯನ್ನು ಆರಂಭಿಸಲಾಗುತ್ತದೆ. ಸಮಸ್ಯೆ ಯಾವ

